

# ಸತ್ಯ ಹೇಳಿದ ಪೂನಂ!

ಬಿಟೌನ್‌ನಲ್ಲಿ ಈಗ್ಗೆ ನಾಲ್ಕೈದು ವರ್ಷದ ಹಿಂದೆ ಪೂನಂ ಪಾಂಡೆ ಎಂಬ 'ನಟಿ'ಯದ್ದೇ ಸುದ್ದಿ. ಟ್ವಿಟರ್, ಫೇಸ್‌ಬುಕ್‌ನಲ್ಲಿ ತಾನು ಮೈಚಳಿ ಬಿಟ್ಟುಕೊಂಡು ನಿಂತ ಚಿತ್ರಗಳನ್ನು ಹಾಕಿ ಪಡ್ಡೆ ಹುಡುಗರ ನಿದ್ದೆಗೆಡಿಸುತ್ತಿದ್ದ ಪೂನಂ, ವಿವಾದಾತ್ಮಕ ಹೇಳಿಕೆಗಳ ಮೂಲಕವೂ ಗಮನ ಸೆಳೆಯುತ್ತಿದ್ದಳು. 2011ರಲ್ಲಿ ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದರೆ ಬೆತ್ತಲಾಗುತ್ತೇನೆ ಎಂಬ ಹೇಳಿಕೆ ನೀಡಿ, ಕೊನೆಗೆ ನುಣುಚಿಕೊಂಡ ಆಕೆಗೆ ವಿವಾದಗಳೆಂದರೆ ಬಲು ಪ್ರೀತಿ. ಹಾಗೆ ಜನಪ್ರಿಯತೆ ಗಳಿಸಿದ್ದು ಆಕೆಯ ಪಾಲಿಗೆ ಲಾಭವಾಗಿ ಒಂದಷ್ಟು ಸಿನಿಮಾಗಳಲ್ಲಿ ಅವಕಾಶವೂ ಸಿಕ್ಕಿತು. ಪೂನಂಳ 'ಹೆಸರು' ಬಳಸಿಕೊಂಡರೂ ಅದರಿಂದ ನಿರ್ಮಾಪಕರಿಗೇನೂ ಗಿಟ್ಟಲಿಲ್ಲ. ಆಕೆ ಇದನ್ನೆಲ್ಲಾ ಮಾಡಿದ್ದು ಪ್ರಚಾರಕ್ಕಾಗಿಯೇ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಅದನ್ನು ಈಗ ಸ್ವತಃ ಪೂನಂ ಒಪ್ಪಿಕೊಂಡಿದ್ದಾಳೆ.

'ಖಾನ್ ಮತ್ತು ಕಪೂರ್' ಕುಟುಂಬದ ಹೆಸರುಗಳಿಂದಾಗಿ ಹೊಸ ನಟಿಯರನ್ನು ಕಡೆಗಣಿಸಲಾಗುತ್ತಿದೆ. ಈ ಕಾರಣದಿಂದಲೇ ಚಿತ್ರರಂಗದ ಗಮನವನ್ನು ತನ್ನತ್ತ ಸೆಳೆಯಲು ವಿವಾದಗಳನ್ನು ಸೃಷ್ಟಿಸಬೇಕಾಯಿತು ಎಂದು ಹೇಳಿದ್ದಾಳೆ ಆಕೆ. ಈ ಹಿಂದೆಯೂ ಖಾನ್ ಮತ್ತು ಕಪೂರ್‌ಗಳತ್ತ ಪೂನಂ ಕಿಡಿ ಕಾರಿದ್ದಳು.

'ಖಾನ್‌ಗಳು ಮತ್ತು ಕಪೂರ್‌ಗಳೊಂದಿಗೆ ಉದ್ಯಮದಲ್ಲಿ ಕೆಲಸ ಮಾಡಿದ ಅನೇಕ ನಟಿಯರನ್ನು ನಾನು ನೋಡಿದ್ದೇನೆ. ಆದರೆ ಜನರಿಗೆ ಈ ಖಾನ್–ಕಪೂರ್‌ಗಳು ಮಾತ್ರವೇ ಗೊತ್ತು. ಹೀಗಾಗಿ ಅವರಾಚೆಗಿನ ನಟಿಯರನ್ನು ಅವರು ಗುರುತಿಸುವುದೇ ಇಲ್ಲ. ಹೀಗಾಗಿ ನನ್ನನ್ನು ಗುರುತಿಸಲು ವಿವಾದಗಳೇ ಸೂಕ್ತ ಮಾರ್ಗ ಎನಿಸಿತು' ಎಂದಿದ್ದಾಳೆ ಆಕೆ.

ಇವೆಲ್ಲಾ ಜನಪ್ರಿಯತೆ ಗಳಿಸಿಕೊಳ್ಳುವ ಒಂದು ಹಂತಕ್ಕೆ ಮಾತ್ರ. ತನಗೀಗ ವಿವಾದಗಳ ಅಗತ್ಯವಿಲ್ಲ. ಏಕೆಂದರೆ ಅವುಗಳ ಮೂಲಕ ಏನನ್ನೆಲ್ಲಾ ಸಾಧಿಸಬೇಕೋ ಸಾಧಿಸಿಯಾಗಿದೆ ಎಂದು ನಗೆ ಬೀರಿದ್ದಾಳೆ ಪೂನಂ. ಅಂದ ಹಾಗೆ, ತೆಲುಗು ಚಿತ್ರಕ್ಕೆ ಪಾದಾರ್ಪಣೆ ಮಾಡುವ ಮೂಲಕ ಪೂನಂ ಉತ್ತರ ದಿಕ್ಕಿನಿಂದ ದಕ್ಷಿಣಕ್ಕೂ ಕಾಲಿಟ್ಟಿದ್ದಾಳೆ.



# ಸಂಬಂಧ ಎಂದರೆ?

ಆತ್ಮೀಯತೆ, ಬಾಂಧವ್ಯ, ಪ್ರೀತಿ, ಕಾಳಜಿ ಮುಂತಾದ ಪದಗಳು ಬಾಲಿವುಡ್‌ನ ನಿರ್ಭಾವುಕ ಜಗತ್ತಿನಲ್ಲಿ ಹಳಸಲಾಗುತ್ತಿವೆಯೇ? ಎರಡು ಮೂರು ತಿಂಗಳಿಗೊಮ್ಮೆ ಬದಲಾಗುವ ಪ್ರೀತಿಗಳು, ಅರ್ಥಹೀನ ಎನಿಸುವ ಮದುವೆಗಳು, ಮುರಿದು ಬೀಳುವ ಸಹಬಾಳ್ವೆ ಒಪ್ಪಂದಗಳು ಬದುಕಿನ ವ್ಯಾವಹಾರಿಕತೆಯನ್ನು ತೋರಿಸುತ್ತವೆ. ಇಲ್ಲಿ ಆಕರ್ಷಣೆಯ ಸಂಬಂಧಗಳು ಮಾತ್ರವಲ್ಲ, ಅಪ್ಪ–ಅಮ್ಮ, ಅಣ್ಣ–ತಂಗಿಯಂತಹ ರಕ್ತ ಸಂಬಂಧಗಳೂ ಗೌಣವಾಗುತ್ತಿವೆ. ಸಿನಿಮಾಗಳಲ್ಲಿ ತನ್ನ ಭಾವನಾತ್ಮಕ ಅಭಿನಯದಿಂದ ಗಮನ ಸೆಳೆಯುವ ನಟಿ ಅಲಿಯಾ ಭಟ್ ನಡೆಯೇ ಉದಾಹರಣೆ.

ನಿರ್ದೇಶಕ ಮಹೇಶ್ ಭಟ್ ಮತ್ತು ನಟಿ–ನಿರ್ದೇಶಕಿ ಸೋನಿ ರಾಜ್ದಾನ್ ದಂಪತಿಯ ಮಗಳಾದ ಅಲಿಯಾ, ಚಿಕ್ಕ ವಯಸ್ಸಿನಲ್ಲಿಯೇ ಬಾಲಿವುಡ್‌ನಲ್ಲಿ ತನ್ನದೇ ಗುರುತು ಮೂಡಿಸಿದ್ದಾಳೆ. ಹಾಗೆಯೇ ಗೂಡಿನಿಂದ ಹೊರ ಹಾರುವ ತನ್ನ ಸ್ವಾತಂತ್ರ್ಯದ ಹಕ್ಕನ್ನೂ ಮಂಡಿಸಿದ್ದಾಳೆ. ತನ್ನ ತಂಗಿಯೊಂದಿಗೆ ಹೊಸ ಮನೆಗೆ ಸ್ಥಳಾಂತರ ಹೊಂದಿದ್ದಾಳೆ ಅಲಿಯಾ. ತನ್ನ ಕುಟುಂಬದ ಇತರೆ ಸದಸ್ಯರೊಂದಿಗಿನ ಆಕೆಯ ಸಂಬಂಧ ಅಂತ್ಯಗೊಂಡಿದೆಯಂತೆ. ಅದರಲ್ಲೂ ಪೋಷಕರೊಂದಿಗಿನ ನಂಟು ಕಳೆದುಕೊಂಡು ಆಕೆ ವರ್ಷಗಳೇ ಉರುಳಿವೆಯಂತೆ.

'ನಾನು ಒಂಟಿಯಾಗಿ ವಾಸಿಸುತ್ತಿಲ್ಲ. ನನ್ನ ಜತೆಗೆ ಸಹೋದರಿಯೂ ಇದ್ದಾಳೆ. ನನ್ನ ಕುಟುಂಬದೊಂದಿಗಿನ ಸಂಬಂಧ ಮುಗಿದು ಹೋಗಿದೆ ಎನಿಸಿದೆ. ಒಂದು ಸಮಯಕ್ಕೆ ಎಲ್ಲ ಬಗೆಯ ಸಂಬಂಧವೂ ಅಂತ್ಯಗೊಳ್ಳಲೇಬೇಕು. ನನ್ನ ಅಮ್ಮ, ನನ್ನ ಅಪ್ಪ ಎಂಬ ಸಂಬಂಧಗಳ ಹೆಸರಿನಿಂದ ಸ್ನೇಹಿತರಾಗಿ ಬದಲಾಗುವ ಹಂತಕ್ಕೆ ತಲುಪುತ್ತೇವೆ' ಎಂಬ ವಿವರಣೆ ನೀಡಿದ್ದಾಳೆ.

'ನಾವು ನಮ್ಮದೇ ಬದುಕಿನ ಜಂಜಾಟಗಳೊಂದಿಗೆ ಸಿಲುಕಿರುತ್ತೇವೆ. ಆದರೂ ಪರಸ್ಪರ ಖುಷಿಯ ಗಳಿಗೆಗಳಿಗೆ ಸಮಯ ಮೀಸಲಿಡುತ್ತೇವೆ. ಈ ಮುಂಚೆ ನಮ್ಮ ಒಡನಾಟ ಈ ರೀತಿ ಇರುತ್ತಿರಲಿಲ್ಲ. ಈಗ ಎಲ್ಲವೂ ಬದಲಾಗಿದೆ' ಎಂದು ಪೋಷಕರೊಂದಿಗಿನ ತನ್ನ ಸಂಬಂಧಗಳನ್ನು ಬೇರೆಯದೇ ರೀತಿ ವ್ಯಾಖ್ಯಾನಿಸುತ್ತಾಳೆ ಅಲಿಯಾ. ಆಕೆಯದ್ದು ಇನ್ನು ಯಾರ ಹಂಗೂ ಇಲ್ಲದ ಸ್ವತಂತ್ರ ಬದುಕು.

■ ಅಮಿ